**ಸಾಕ್ಷಿಗೆ ದಿನಾಂಕಃ21-01-2026 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ಪ್ರತಿವಾದಿಗಳ ಪರ ಶ್ರೀ.TRS ವಕೀಲರಿಂದ ::**

ಈ ದಾವೆಯನ್ನು ನಮ್ಮ ಜಮೀನಿನಲ್ಲಿ ಹೋಗಿರುವ ಚಾನಲ್ ನಲ್ಲಿ ಭಾಗ ಬರಬೇಕೆಂದು ಹೂಡಿರುತ್ತೇನೆ. ಈ ದಾವೆಯನ್ನು ಕಾರೇಹಳ್ಳಿ ಗ್ರಾಮದ ಸರ್ವೇ ನಂಬರ್ 3/2 ಕ್ಕೆ ಸಂಬಂಧಪಟ್ಟಂತೆ 4 ಎಕರೆ 34 ಗುಂಟೆಗೆ ಸಂಬಂಧಪಟ್ಟಂತೆ ಹೂಡಿದ್ದು, ಅದರಲ್ಲಿ ನನಗೆ ಒಂದು ಎಕರೆ ಭಾಗ ಬರಬೇಕಾಗಿರುತ್ತದೆ. ನಾನು ಈಗ ಹೇಳುತ್ತಿರುವ ಜಾಗದ ಪೂರ್ವಕ್ಕೆ ಚಂದ್ರಶೇಖರಪ್ಪ ರವರ ಜಮೀನು, ಪಶ್ಚಿಮಕ್ಕೆ ಸಿದ್ದಪ್ಪ ಎನ್ನುವವರ ಜಮೀನು, ಉತ್ತರಕ್ಕೆ ಮರಿಸೋಮಜ್ಜ ರವರ ಜಮೀನು ಮತ್ತು ದಕ್ಷಿಣಕ್ಕೆ ನನ್ನ ಉಳಿಕೆ ಜಮೀನು ಇರುತ್ತದೆ. ದಾವೆಯನ್ನು ಹೂಡಲು ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಈ ದಾವೆಯನ್ನು ಎಷ್ಟು ವಿಸ್ತೀರ್ಣದ ಜಾಗಕ್ಕೆ ಹೂಡಿರುತ್ತಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ.

ನನ್ನ ತಂದೆಯ ಹೆಸರು ಮಲ್ಲಿಯಪ್ಪ ಎಂದರೆ ಸರಿ. ನನ್ನ ದೊಡ್ಡಪ್ಪ ನ ಹೆಸರು ತಿಮ್ಮಣ್ಣ ಆಗಿರುತ್ತದೆ ಎಂದರೆ ಸರಿ. ಸೋಮಣ್ಣ ನನ್ನ ಮತ್ತೊಬ್ಬ ದೊಡ್ಡಪ್ಪ ಆಗಿರುತ್ತಾರೆ. ಪಾರ್ವತಮ್ಮ ಮತ್ತು ಗೌರಮ್ಮ ಎನ್ನುವವರು ನನಗೆ ಅತ್ತೆಯಂದಿರಾಗಬೇಕು. ಸಿದ್ದರಾಮಪ್ಪ ಮತ್ತು ಕಲ್ಲತ್ತಪ್ಪ ರವರ ಸಹೋದರರಾಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜನ ಹೆಸರು ಸಿದ್ದರಾಮಣ್ಣ ಆಗಿರುತ್ತದೆ. ಸದರಿ ವ್ಯಕ್ತಿಯ ತಮ್ಮನ ಹೆಸರು ಕಲ್ಲತ್ತಪ್ಪ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಅಜ್ಜನ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಹೂಡುವ ಸಮಯದಲ್ಲಿ ನಮ್ಮ ಕುಟುಂಬದ ವಂಶವೃಕ್ಷದ ಮಾಹಿತಿಯನ್ನು ನನ್ನ ವಕೀಲರಿಗೆ ನಾನೇ ಹೇಳಿರುತ್ತೇನೆ. ನನ್ನ ವಾದ ಪತ್ರದಲ್ಲಿ ಸಿದ್ದರಾಮಪ್ಪ ಯಾನೆ ಶಿದ್ರಾಮಣ್ಣ ಬಿನ್ ಸೋಮಣ್ಣ ಎಂದು ನನ್ನ ಮಾಹಿತಿಯ ಮೇರೆಗೆ ಬರೆದಿರಲಾಗಿರುತ್ತದೆ ಎಂದರೆ ಸರಿ. ಸದರಿ ಸಿದ್ದರಾಮಪ್ಪನಿಗೆ ಕಲ್ತತ್ತಪ್ಪ ಎನ್ನುವ ತಮ್ಮ ಇದ್ದರು ಎಂದರೆ ನನಗೆ ಗೊತ್ತಿಲ್ಲ. ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಜಮೀನು ಚಿಕ್ಕನೆಲ್ಲೂರು ಗ್ರಾಮದಲ್ಲೂ ಸಹ ಇರುತ್ತದೆ ಎಂದರೆ ಸರಿ. ಈ ದಾವೆಯ ದಾವಾ ಆಸ್ತಿ ಕಾರೇನಹಳ್ಳಿ ಗ್ರಾಮದಲ್ಲಿ ಇರುತ್ತದೆ ಎಂದರೆ ಸರಿ. ಚಿಕ್ಕನೆಲ್ಲೂರು ಗ್ರಾಮದಲ್ಲಿ ನನ್ನ ತಂದೆಗೆ ಜಾಗವು ಯಾವ

ಸರ್ವೇ ನಂಬರ್ ಎಂದು ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ಚಿಕ್ಕನೆಲ್ಲೂರು ಗ್ರಾಮದ ಆಸ್ತಿಗಳ ವಿವರಣೆ ಬಗ್ಗೆ ನನ್ನ ವಕೀಲರಿಗೆ ನಾನೇ ಮಾಹಿತಿ ನೀಡಿರುತ್ತೇನೆ.

ಸದರಿ ಚಿಕ್ಕನೆಲ್ಲೂರು ಗ್ರಾಮದಲ್ಲಿ ನನ್ನ ತಂದೆಗೆ ಒಟ್ಟು 5 ಎಕರೆ 27 ಗುಂಟೆ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ ಎಂದರೆ ಸರಿ. ಅದೇ ರೀತಿ ಅದೇ ಗ್ರಾಮದಲ್ಲಿಯೇ ನನ್ನ ದೊಡ್ಡಪ್ಪನಿಗೆ 4 ಎಕರೆ 25 ಗುಂಟೆ ಹೋಗಿರುತ್ತದೆ ಎಂದರೆ ಸರಿ. ಮತ್ತೊಬ್ಬ ದೊಡ್ಡಪ್ಪ ತಿಮ್ಮಣ್ಣನಿಗೆ ಅದೇ ಗ್ರಾಮದಲ್ಲಿ 6 ಎಕರೆ 4 ಗುಂಟೆ ಬಂದಿರುತ್ತದೆ ಎಂದರೆ ಸರಿ. ಈಗ ಹೇಳಿದ ಆಸ್ತಿಗಳಿಗೆ ಸಂಬಂಧಪಟ್ಟಂತೆ ನನ್ನ ತಂದೆ ಹಾಗೂ ಅವರ ಸಹೋದರರು 07.07.1984 ರಲ್ಲಿ ಪಾಲುಪಾರೀಕತ್ತಿನ ಮುಖಾಂತರ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಪಾಲುಪಾರೀಕತ್ತು ನನ್ನ ತಂದೆಯ ಬಳಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪಾಲುಪಾರೀಕತ್ತು ನನ್ನ ತಂದೆಯ ಬಳಿ ಇದ್ದರೂ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ದೊಡ್ಡಪ್ಪ ತಿಮ್ಮಪ್ಪನ ಮಗ ಸೋಮಶೇಖರ ಎನ್ನುವವರು ಸದರಿ ಪಾಲುಪಾರೀಕತ್ತನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದಲು ಆ ರೀತಿ ತೆಗೆದುಕೊಂಡು ಹೋಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ 2 ವರ್ಷದ ಹಿಂದೆ ಮೃತರಾಗಿರುತ್ತಾರೆ. ದಾವಾ ಸರ್ವೇ ನಂಬರ್ 3/2 ರಲ್ಲಿ ನನಗೆ 1 ಎಕರೆ ಆಸ್ತಿ ಬರಬೇಕಾಗಿರುತ್ತದೆ. ಸರ್ವೇ ನಂಬರ್ 3/2 ರಲ್ಲಿ ನನ್ನ ತಂದೆ 1991 ನೇ ಸಾಲಿನಲ್ಲಿ ಪರಮೇಶ್ವರಪ್ಪ ಎನ್ನುವವರಿಗೆ 1 ಎಕರೆ ಆಸ್ತಿಯನ್ನು ನೋಂದಾಯಿತ ಕ್ರಯಪತ್ರದ ಅಡಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಾರಾಟ ಮಾಡಿರುವ ಜಾಗದ ಪೂರ್ವಕ್ಕೆ ತಿಮ್ಮಪ್ಪನ ಹಿಸ್ಸೆ, ಪಶ್ಚಿಮಕ್ಕೆ ನಾಗರಾಜಪ್ಪ ನ ಜಮೀನು ಮತ್ತು ಚಿಕ್ಕನೆಲ್ಲೂರು ಗಡಿ, ಉತ್ತರಕ್ಕೆ ಮರಿ ಸೋಮಣ್ಣನ ಜಮೀನು ಮತ್ತು ದಕ್ಷಿಣಕ್ಕೆ ಯಾಗಮಲ್ಲಿಯಪ್ಪನ ಜಮೀನು ಎಂದು ಕ್ರಯಪತ್ರದಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ಮಾರಾಟ ಮಾಡಿರುವ ಸದರಿ 1 ಎಕರೆ ಜಾಗವು ಕುಟುಂಬದಲ್ಲಿ ಆದ ಪಾಲುಪಾರೀಕತ್ತಿನಲ್ಲಿ ನಮೂದಾಗಿದೆ ಎಂದರೆ ಸರಿ. ಸದರಿ ಸರ್ವೇ ನಂಬರ್ ನಲ್ಲಿಯೇ ನನ್ನ ದೊಡ್ಡಪ್ಪ ಸೋಮಣ್ಣನಿಗೆ 1 ಎಕರೆ 34 ಗುಂಟೆ ಭಾಗ ಹೋಗಿರುತ್ತದೆ ಎಂದರೆ ಸರಿ. ನನ್ನ ದೊಡ್ಡಪ್ಪ ಸೋಮಣ್ಣ ಹೆಂಡತಿ ಮಹೇಶ್ವಮ್ಮ / 5ನೇ ಪ್ರತಿವಾದಿ ಎಂದರೆ ಸರಿ. ಸದರಿ ಆಸ್ತಿಯು ಹೊಸ ಸರ್ವೇ ನಂಬರ್ 3/15 ಆಗಿದ್ದು ಅದರ ಖಾತೆಯು ಪ್ರಸ್ತುತದಲ್ಲಿ

ಮಹೇಶ್ವಮ್ಮ / 5 ನೇ ಪ್ರತಿವಾದಿಯ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮಹೇಶ್ವಮ್ಮ / 5 ನೇ ಪ್ರತಿವಾದಿಯ ಜಮೀನಿನ ಪೂರ್ವಕ್ಕೆ ಬಸವೇಗೌಡರ ತೆಂಗಿನ ತೋಟ, ಪಶ್ಚಿಮಕ್ಕೆ ತಿಮ್ಮಣ್ಣನ ಹಿಸ್ಸೆ, ಉತ್ತರಕ್ಕೆ ಮರಿಸೋಮಣ್ಣ ರವರ ಜಮೀನು ಮತ್ತು ದಕ್ಷಿಣಕ್ಕೆ ಯಾಗಮಲ್ಲಿಯಪ್ಪನ ಜಮೀನು ಇರುತ್ತದೆ ಎಂದರೆ ಸರಿ. ಈಗ ಹೇಳುತ್ತಿರುವ ಜಾಗದಲ್ಲಿನ 32 ಗುಂಟೆ ಜಾಗವನ್ನು ಭದ್ರಾ ಮೇಲ್ದಂಡೆ ಯೋಜನೆಯಡಿ ಸ್ವಾಧೀನ ಪಡೆಯಲಾಗಿರುತ್ತದೆ ಎಂದರೆ ಸರಿ. ಸದರಿ ಸಮಯದಲ್ಲಿ ಸರ್ಕಾರದಿಂದ ನನಗೂ ಹಾಗೂ ನನ್ನ ತಂದೆಗೂ ನೋಟೀಸ್ ನೀಡಲಾಗಿರುತ್ತದೆ. ಸದರಿ ನೋಟಿಸ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನಗಾಗಲೀ, 2 ನೇ ಪ್ರತಿವಾದಿಗಾಗಲೀ ಸರ್ಕಾರದಿಂದ ಯಾವುದೇ ನೋಟೀಸ್ ಬಾರದಿದ್ದರೂ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ನ 4 ಎಕರೆ 34 ಗುಂಟೆ ಬಾಬ್ತು ನನ್ನ ಅಜ್ಜನ ತಮ್ಮ ಕಲ್ಲತ್ತಪ್ಪನಿಗೆ ಕುಟುಂಬದ ವಿಭಾಗದ ಅಡಿ 2 ಎಕರೆ ಆಸ್ತಿ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಿಃ 04.02.1970 ರಂದು ಸದರಿ ಕಲ್ಲತ್ತಪ್ಪ ನನ್ನ ದೊಡ್ಡಪ್ಪ ತಿಮ್ಮಪ್ಪನಿಗೆ ಸದರಿ ಜಾಗವನ್ನು ನೋಂದಾಯಿತ ಕ್ರಯಪತರದ ಅಡಿಯಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ಸಂಬಂಧಪಟ್ಟ ಕ್ರಯಪತ್ರದಲ್ಲಿ ಸ್ವತ್ತಿನ ಪೂರ್ವಕ್ಕೆ ಬಸವೇಗೌಡರ ಜಮೀನು, ಪಶ್ಚಿಮಕ್ಕೆ ಚಿಕ್ಕನೆಲ್ಲೂರು ಗಡಿ, ಉತ್ತರಕ್ಕೆ ಮರಿ ಸೋಮಣ್ಣ ರವರ ಜಮೀನು ಮತ್ತು ದಕ್ಷಿಣಕ್ಕೆ ಸಿದ್ದರಾಮಣ್ಣ ರವರ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈ ರೀತಿ ದಾವಾ ಸರ್ವೆ ನಂಬರ್ 3/2 ರಲ್ಲಿನ 4 ಎಕರೆ 34 ಗುಂಟೆ ಜಾಗಕ್ಕೆ ಸಂಬಂಧಪಟ್ಟ ಆದ ವಿಭಾಗದಲ್ಲಿ  ನನ್ನ ತಂದೆಗೆ 1 ಎಕರೆ ಜಾಗ ಬಂದಿದ್ದು, ಅದನ್ನು ಪರಮೇಶ್ವರಪ್ಪ ರವರಿಗೆ ಮಾರಾಟ ಮಾಡಿದ್ದು, ನನ್ನ ದೊಡ್ಡಪ್ಪ ಸೋಮಣ್ಣನಿಗೆ 1 ಎಕರೆ 34 ಗುಂಟೆ ಜಾಗ ಬಂದಿದ್ದು, ಅದು ಪ್ರಸ್ತುತದಲ್ಲಿ 5 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದು ಮತ್ತು ನನ್ನ ಅಜ್ಜನ ತಮ್ಮ ಕಲ್ಲಪ್ಪನಿಗೆ ಬಂದ 2 ಎಕರೆ ಜಾಗವನ್ನು ನನ್ನ ದೊಡ್ಡಪ್ಪ ತಿಮ್ಮಣ್ಣನಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವ್ಯವಹಾರಗಳು ಆದ ನಂತರದಲ್ಲಿ ಖಾತೆಗಳು ಸಹ ಬದಲಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರ್ ನಲ್ಲಿ ಆಗಿರುವ ಖಾತಾ ಬದಲಾವಣೆಗಳನ್ನು ನಾನು ಕಂದಾಯ ಅಧಿಕಾರಿಗಳ ಮುಂದೆ ಇವರೆಗೂ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಖಾತಾ ಬದಲಾವಣೆ ಆಧಾರದಲ್ಲಿ

ಸದರಿ ಜಾಗದ ಸ್ವಾಧೀನದಾರರು ಅದರ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಭದ್ರ ಮೆಲ್ದಂಡೆ ಯೋಜನೆಯಡಿಲ್ಲಿ ನನ್ನ ದೊಡ್ಡಪ್ಪ ಸೋಮಣ್ಣನಿಗೆ ಬಂದ ಆಸ್ತಿಯಲ್ಲಿ ಕೆಲವು ಭಾಗವನ್ನು ಸ್ವಾಧೀನ ಪಡೆದು ಸರ್ಕಾರವು ಅವರಿಗೆ ಪರಿಹಾರ ನೀಡಿದ್ದು ಅದಕ್ಕೆ ಹಾಗೂ ನನಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಭೂ ಸ್ವಾಧೀನ ಅಧಿಕಾರಿಗಳು ನಕ್ಷೆ ತಯಾರಿಸಿ ಸದರಿ ಸ್ವಾಧೀನಪಡೆದ ಜಾಗವು ಸೋಮಣ್ಣನಿಗೆ ಸೇರಿದ ಜಾಗ ಆಗಿರುತ್ತದೆ ಎಂದು ನಮೂದಿಸಿರುತ್ತಾರೆ ಎಂದರೆ ಸಾಕ್ಷಿಯು ಅವರು ಮೋಸದಿಂದ ಸುಳ್ಳು ನಕ್ಷೆ ತಯಾರಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ನಕ್ಷೆಯನ್ನು ನಾನು ಸಂಬಂಧಪಟ್ಟ ಇಲಾಖೆಯಲ್ಲಿ ಪ್ರಶ್ನೆ ಮಾಡಿರುತ್ತೇನೆ. ಸದರಿ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಸೋಮಣ್ಣ ಕುಟುಂಬದವರಿಗೆ ಪರಿಹಾರ ಬಂದ ಕಾರಣ ನಾನು ಈ ದಾವೆ ಹೂಡಿದ್ದು, ಆ ರೀತಿ ಪರಿಹಾರ ಬಾರದೇ ಇದ್ದರೆ ನಾನು ಈ ದಾವೆಯನ್ನು ಹೂಡುತ್ತಿರಲಿಲ್ಲ ಎಂದರೆ ಸರಿಯಲ್ಲ. ದಾವಾ ಎ ಸ್ವತ್ತು ನನ್ನ ಅಥವಾ ನನ್ನ ತಂದೆಯ ಹೆಸರಿನಲ್ಲಿ ಇರುವ ಬಗ್ಗೆ ಕಂದಾಯ ದಾಖಲೆಗಳು ಇರುತ್ತವೆ. ಅದೇ ರೀತಿ ದಾವಾ ಬಿ ಸ್ವತ್ತಿಗೆ ಸಂಬಂಧಪಟ್ಟಂತೆ ಸಹ ನನ್ನ ಅಥವಾ ನನ್ನ ತಂದೆಯ ಹೆಸರಿನಲ್ಲಿ ಇರುವ ಬಗ್ಗೆ ಕಂದಾಯ ದಾಖಲೆಗಳು ಇರುತ್ತವೆ. ಈ ದಾವೆಯನ್ನು ಸರ್ಕಾರದಿಂದ ಸೋಮಣ್ಣ ಕುಟುಂದವರಿಗೆ ಯಾವುದೇ ಪರಿಹಾರ ನೀಡಬಾರದೆಂದು ಕೋರಿ ಹೂಡಿರುತ್ತೇನೆ. ದಾವಾ ಸರ್ವೇ ನಂಬರ್ 3/2 ರಲ್ಲಿ ನನಗೆ ಯಾವುದೇ ಹಕ್ಕು, ಹಿತಾಸಕ್ತಿ ಇಲ್ಲದಿದ್ದರೂ ಸೋಮಣ್ಣನ ಕುಟುಂಬದವರಿಗೆ ತೊಂದರೆ ಕೊಡಲು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ದೊಡ್ಡಪ್ಪ ನ ಕುಟುಂಬದವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.